ಮಾಗಡಿ ಪಟ್ಟಣದಲ್ಲಿ ಪಡಿತರ ಚೀಟಿಗಳನ್ನು ನೀಡುವುದರ ಬಗ್ಗೆ.

೭೯೧ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಪಟ್ಟಣದಲ್ಲಿ ಹೆಚ್ಚಿನ ಜನತೆಗೆ ಪಡಿತರ ಚೀಟಿಗಳನ್ನು ನೀಡದಿರುವುದು ನಿಜವೆ;

ಆ) ಹಾಗಿದ್ದಲ್ಲಿ ಅಂತಹವರಿಗೆ ಪಡಿತರ ಚೀಟಿಯನ್ನು ನೀಡಲು ಕ್ರಮಕೈಗೊಳ್ಳುವರೆ?

ಶ್ರೀ ಅಜೀಜ್‌ಸೇಟ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.)—

ಅ) ಇಲ್ಲ, (೨೭೫೦ ಪಡಿತರ ಚೀಟಿಗಳನ್ನು ಮಾಗಡಿ ಪಟ್ಟಣದಲ್ಲಿ ನೀಡಲಾಗಿದೆ.)

ಆ) ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ಸೂಕ್ತ ತಪಾಸಣೆಯಾಗೂ ಸ್ಥಳೀಕರ ವಿಚಾರಣೆ ನಂತರ ನೀಡಲು ಆದೇಶ ನೀಡಲಾಗಿದೆ.

ತುಮಕೂರು ಬೆಂಗಳೂರು ನಡುವೆ

ತಡೆ ರಹಿತ ಬಸ್ಸುಗಳು ಸಾಕಷ್ಟು ಸಂಖ್ಯೆ ಓಡದಿರುವುದರಿಂದ ಪ್ರಯಾಣಿಕರಿಗೆ ತೊಂದರೆ

೭೯೩ ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೆ?

ಅ) ತುಮಕೂರು ಬೆಂಗಳೂರು ನಡುವೆ ಹೋಗಿ ಬರುವ ತಡೆ ರಹಿತ ಬಸ್ಸುಗಳು ಸಾಕಷ್ಟು ಸಂಖ್ಯೆಯಲ್ಲಿ ಓಡದೆ ಇರುವುದರಿಂದ ಪ್ರಯಾಣಿಕರಿಗೆ ಉಂಟಾಗಿರುವ ತೀವ್ರ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಪ್ರಯಾಣಿಕರ ತೊಂದರೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು)—

ಅ) ಹೌದು.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ದಿಕ್ಕಿನಿಂದ ೨೬ ಟ್ರಿಪ್‌ಗಳ ತಡೆರಹಿತ ಬಸ್ಸುಗಳನ್ನು ಓಡಿಸುವುದಲ್ಲದೆ ತುಮಕೂರಿನಿಂದ ಬೆಂಗಳೂರಿಗೆ ೬ ಹೆಚ್ಚುವರಿ ತಡೆರಹಿತ ಟ್ರಿಪ್‌ಗಳನ್ನು ದಿನಾಂಕ ೧೦-೬-೯೦ರಿಂದ ಪ್ರಾರಂಭಿಸಲಾಗಿದೆ.

ಭದ್ರಾ ಕಾಡಾ ವ್ಯಾಪ್ತಿಗೆ ಬರುವ ನೀರಾವರಿ ಚಾನಲ್‌ಗಳು ಸಬ್ ಚಾನಲ್‌ಗಳು ಮತ್ತು ಪಿಕ್‌ಅಪ್‌ಗಳದುರಸ್ತಿ

೭೮೭. ಶ್ರೀ ಕರಿಯಣ್ಣ (ಹೊಳೆಹೊನ್ನೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾ ಕಾಡಾ ವ್ಯಾಪ್ತಿಗೆ ಬರುವ ನೀರಾವರಿ ಚಾನಲ್‌ಗಳು ಸಬ್‌ಚಾನಲ್‌ಗಳು ಮತ್ತು ಪಿಕ್‌ಅಪ್‌ಗಳು ನೀರಿನಿಂದ ಕೂರೆದು ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇವುಗಳ ದುರಸ್ತಿಯ ಸಲುವಾಗಿ ಕೈಗೊಂಡ ಕ್ರಮಗಳೇನು ?

ಇ) ೧೯೯೦-೯೧ರಲ್ಲಿ ಇವುಗಳ ದುರಸ್ತಿಗಾಗಿ ಒದಗಿಸಿದ ಹಣವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬಂದಿದೆ.

ಆ) ನೀಡಲಾದ ಅನುದಾನವನ್ನನುಸರಿಸಿ ದುರಸ್ತಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಸಾಲಿನಲ್ಲಿ ಲಭ್ಯವಿರುವ ಅನುದಾನವನ್ನನುಸರಿಸಿ ಅತ್ಯವಶ್ಯಕದ ಹಾಗೂ ಪರಿಣಾಮಕಾರಿಯಾಗಿ ಗುರುತಿಸಲಾದ ಭಾಗಗಳಲ್ಲಿ ದುರಸ್ತಿ ಕೆಲಸಗಳನ್ನು ಕೈಗೊಳ್ಳುವುದು.

೫) ಶೀರ್ಷಿಕೆ ೨೭೦೧ರ ಅಡಿಯಲ್ಲಿ ಕೆಳಕಂಡಂತೆ ಒದಗಿಸಲಾಗಿದೆ.

೧. ಬದ್ರಾ ಯೋಜನೆಗೆ ೧೨೧.೦೧ ಲಕ್ಷ ರೂ.ಗಳು

೨. ಗೊಂದಿ ಅಣೆಕಟ್ಟೆಗೆ ೫.೧೪ ಲಕ್ಷ ರೂ.ಗಳು

ಕ.ರಾ.ರ.ಸಾ. ಸಂಸ್ಥೆಯು ೩ ವರ್ಷಗಳಲ್ಲಿ ಖರೀದಿಸಿದ ಛಾಸಿ, ಟೈರ್‌ಗಳು, ಟ್ಯೂಬ್, ಫ್ಲಾಪ್ ಮತ್ತು ಬಿಡಿಭಾಗಗಳು

೫೬೪. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಕ.ರಾ.ರ.ಸಾ. ಸಂಸ್ಥೆಯು ಖರೀದಿಸಿದ ಛಾಸಿ, ಟೈರು, ಟ್ಯೂಬ್, ಫ್ಲಾಪ್ ಮತ್ತು ಇತರ ಬಿಡಿಭಾಗಗಳ ಹಣದ ಮೊತ್ತ ?

ಆ) ಇವುಗಳನ್ನು ಖರೀದಿಸಲು ಟೆಂಡರು ಕರೆದಿರುತ್ತದೆಯೇ ?

ಇ) ಮೇಲೆ ಕಾಣಿಸಿದ ಸರಬರಾಜು ಮಾಡುವ ತಯಾರಕರ ಹೆಸರುಗಳು

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಛಾಸಿ, ಟೈರು, ಟ್ಯೂಬ್ ಮುಂತಾದ ಸರಕುಗಳನ್ನು ಖರೀದಿಸಲು ಖರ್ಚು ಮಾಡಿರುವ ಹಣದ ಮೊತ್ತವು ಈ ಕೆಳಕಂಡಂತಿವೆ.

ಸರಕುಗಳ ವಿವರ	ಖರ್ಚು ಮಾಡಿರುವ ಹಣದ ವಿವರ (ಲಕ್ಷ ರೂ. ಗಳಲ್ಲಿ)		
	೧೯೮೭–೮೮	೧೯೮೮–೮೯	೧೯೮೯–೯೦
ಛಾಸಿ	೨೭೪೬–೨೮	೨೯೦೮–೦೫	೨೪೬೫–೦೦
ಟೈರು, ಟ್ಯೂಬು ಮತ್ತು ಫ್ಲಾಪ್‌ಗಳು	೨೫೭೭–೭೫	೨೮೬೮–೬೬	೨೭೨೬–೦೦
ಬಿಡಿಭಾಗಗಳು	೧೧೦೫–೪೧	೧೫೪೪–೨೭	೧೬೪೪–೪೫
ಇತರೆ ಬಳಕೆ ವಸ್ತುಗಳು	೧೦೬೪–೨೬	೧೨೯೩–೧೮	೧೨೧೨–೦೦
	೭೪೯೩–೭೦	೮೬೧೯–೧೬	೮೦೪೭–೪೫

ಆ) ಟೆಂಡರುಗಳನ್ನು ಕರೆಯಬೇಕೆ ಅಥವಾ ಬೇಡವೇ ಎಂಬುದು ಖರೀದಿ ಮಾಡುವ ಸಾಮಾನುಗಳ ಮೇಲೆ ಅವಲಂಬಿಸಿರುವುದು.

ಇವುಗಳ ಖರೀದಿಯಲ್ಲಿ ಮೂರು ತರಹಗಳಿವೆ.—

೧) ಮೂಲ ಒಡೆತನದ ಬಿಡಿಭಾಗಗಳು.—ಇವುಗಳನ್ನು ಮೂಲ ತಯಾರಕರಿಂದ ಅಂದರೆ ಅಶೋಕ ಲೇಲ್ಯಾಂಡ್, ಟಾಟಾ, ಲೂಕಾಸ್, ಟಿ.ವಿ.ಎಸ್., ಮೈಕೋ, ಬ್ರೇಕ್ಸ್ ಇಂಡಿಯಾ, ಆಟೋ ಮೊಬೈಲ್ ಪ್ರಾಡಕ್ಟ್ಸ್ ಆಫ್ ಇಂಡಿಯಾ ಮುಂತಾದವರುಗಳಿಂದ ಖರೀದಿಸಲಾಗುವುದು.

೨) ದರ ಸಂವಿದದಲ್ಲಿರುವ ಬಿಡಿಭಾಗಗಳು.—ಇವುಗಳಿಗೆ ಕೇಂದ್ರ ಬಾಹ್ಯ ಸಾರಿಗೆ ಇಲಾಖೆ ಪತಿಯ ಸ್ವಾಯತ್ತ ಸಂಸ್ಥೆಯಾದ ಎ.ಎಸ್.ಆರ್.ಟಿ.ಯು, ನ್ಯೂಡೆಲ್ಲಿಯವರಂ ದರಸಂವಿದೆಗಳನ್ನು ನಿರ್ಧರಿಸುವರು. ಸರಕುಗಳನ್ನು ಬೆಲೆಗಳ ಹೋಲಿಕೆಯಾದ ಮೇಲೆ ತಾಂತ್ರಿಕ ಪರಿಪೂರ್ಣತೆಯಿರುವ ವಸ್ತುಗಳ ತಯಾರಕರಿಂದ ಖರೀದಿಸಲಾಗುವುದು.

೩) ಹಲ ಕೆಲವು ಸರಕುಗಳನ್ನು ಕ.ರಾ.ರ.ಸಾ. ಸಂಸ್ಥೆಯಿಂದ ಪೋಷಿತ : ಪೂರಕ ಕೈಗಾರಿಕೆಗಳಿಂದಲೂ, ಕರ್ನಾಟಕ ಸಣ್ಣ ಕೈಗಾರಿಕಾ ಘಟಕಗಳಿಂದಲೂ, ದರಸಂವಿದದಲ್ಲಿರುವ ಬೆಲೆಗಳನ್ನು ತುಲನೆಮಾಡಿ ಖರೀದಿಸಲಾಗುವುದು.

೪) ಟೆಂಡರು ಸರಕುಗಳನ್ನು ನೊಂದಾಯಿಸಿದ ಸರಬರಾಜುದಾರರಿಂದ ಮತ್ತು ಗೊತ್ತಿರುವ ತಯಾರಕರಿಂದ ಟೆಂಡರುಗಳ ಮೂಲಕ ಖರೀದಿಸಲಾಗುವುದು.